ಉತ್ತರ

ಅ) 11.

ಆ) ಭಾಗಶಃ ಸ್ಥಗಿತಗೊಳಿಸಲಾಗಿದೆ.

ಇ) ವಿಶ್ವ ಮುಕ್ತ ಮಾರುಕಟ್ಟೆಯ ಕಾರಣ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ಹಿನ್ನೆಲೆಯಲ್ಲಿ ರಾಜ್ಯದ ಸಮಗ್ರ ರೇಷ್ಮೆ ಅಭಿವೃದ್ಧಿಗಾಗಿ ಕಾಯಿದೆ ಜಾರಿ ವಿಭಾಗದ ಕೆಲವು ಸಿಬ್ಬಂದಿಯನ್ನು ಕ್ಷೇತ್ರ ಮಟ್ಟದ ಕಛೇರಿಗಳಿಗೆ ಇಲಾಖೆಯ ಅಭಿವೃದ್ಧಿ ಕಾರ್ಯ ನಿರ್ವಹಿಸುವಂತೆ ಸ್ಥಳಾಂತರಗೊಳಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ಬೆಂಗಳೂರಿನ ಖನಿಜ ಭವನದ ಒಳಾಂಗಣ ಅಲಂಕಾರಕ್ಕಾಗಿ ಖರ್ಚು ಮಾಡಿದ ಹಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 400(190)

ಸದಸ್ಯರ ಹೆಸರು : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವವರು : ಶ್ರೀ ವಿ.ಮುನಿಯಪ್ಪ(ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಪ್ರಶ್ನೆ

ಅ. ಬೆಂಗಳೂರಿನಲ್ಲಿರುವ ಖನಿಜ ಭವನದ ಒಳಾಂಗಣ ಅಲಂಕಾರಕ್ಕಾಗಿ ಒಂದು ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದೆಯೇ?

ಆ. ಈ ಬಗ್ಗೆ ರಾಜ್ಯ ಶ್ರೇಷ್ಠ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮನವಿಯನ್ನು ಸಲ್ಲಿಸಲಾಗಿತ್ತೆ?

ಇ. ಈ ಬಗ್ಗೆ ರಾಜ್ಯ ಸರ್ಕಾರ ಯಾವುದಾದರೂ ತನಿಖೆಗೆ ಆದೇಶಿಸಿದೆಯೇ?

ಉತ್ತರ

ಅ. ಹೌದು.

ಆ. ಹೌದು.

ಇ. ಶ್ರೀ ಬಿ.ಆರ್.ನಾನಾರಾವ್ ಇವರಿಂದ ಬಂದ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತವು ಅಂತರಿಕ ಅಲಂಕಾರದ ವೆಚ್ಚದ ಬಗ್ಗೆ ತನಿಖೆ ನಡೆಸುತ್ತಿದೆ. ಇದಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿ ಮತ್ತು ಕಡತಗಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಲೋಕಾಯುಕ್ತಕ್ಕೆ ಒದಗಿಸಿದೆ.

ಬೆಂಗಳೂರಿನಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 401(196)

ಸದಸ್ಯರ ಹೆಸರು : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಉತ್ತರಿಸುವ ಸಚಿವರು : ಪ್ರೊ।।ಬಿ.ಕೆ.ಚಂದ್ರಶೇಖರ್(ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

ಪ್ರಶ್ನೆ

ಅ. ಬೆಂಗಳೂರಿನಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೆ?

ಆ. ಹಾಗಿದ್ದಲ್ಲಿ ಈ ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ. ಈ ಜೈವಿಕ ತಂತ್ರಜ್ಞಾನ ಪಾರ್ಕ್ ಸ್ಥಾಪನೆಗೆ ಎಲ್ಲಿ ಜಾಗವನ್ನು ನಿಗದಿಪಡಿಸಲಾಗಿದೆ?

ಈ. ಇದಕ್ಕಾಗಿ 2001-02ನೇ ಸಾಲಿನಲ್ಲಿ ಸರ್ಕಾರ ಖರ್ಚು ಮಾಡಲಿರುವ ಹಣವೆಷ್ಟು?

ಉತ್ತರ

ಅ. ಹೌದು.

ಆ. ಜೈವಿಕ ತಂತ್ರಜ್ಞಾನ ಪಾರ್ಕ್‌ನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಸೂಕ್ತ ಸ್ಥಳದ ಪರಿಶೀಲನೆ ನಡೆಸಲಾಗುತ್ತಿದೆ.